<u>ದಿನಾಂಕ 10-01-2024 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>: ಪಾಟೀ ಸವಾಲುಃ ವಾದಿಯರ ಪರ ಶ್ರೀ. ಆರ್ ಎಸ್ ಟಿ ವಕೀಲರಿಂದ :</u>

ನಾನು 5 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಅಲ್ಪ ಸ್ವಲ್ಪ ಓದಲು ಬರೆಯಲು ಬರುತ್ತದೆ. ಈ ದಾವೆಯನ್ನು ಆಸ್ತಿ ಕೇಳಿ ಸಲ್ಲಿಸಿದ್ದಾರೆ. ನನ್ನ ತಂದೆಯ ಹೆಸರು ಮೌಲಾಲಿಸಾಬ. ನನ್ನ ತಾಯಿಯ ಹೆಸರು ಖೈರುನ್ನಿಸಾ. ನನ್ನ ತಂದೆ ತಾಯಿ ಈಗ ಬದುಕಿಲ್ಲ. ನನ್ನ ತಂದೆ ತಾಯಿಗೆ ನಾವು ಒಟ್ಟು 8 ಜನ ಮಕ್ಕಳು. 5 ಜನ ಹೆಣ್ಣು ಮತ್ತು 3 ಜನ ಗಂಡು ಮಕ್ಕಳು. ನಮ್ಮನ್ನು ಹೊರತುಪಡಿಸಿ ನನ್ನ ತಂದೆ ತಾಯಿಗೆ ಬೇರೆ ವಾರಸುದಾರರು ಇಲ್ಲ. ನನ್ನ ತಂದೆ ದಿನಾಂಕ 4-9-1988 ರಂದು ಪೋತಿಯಾಗಿದ್ದಾರೆ. ನನ್ನ ತಾಯಿ ಮೃತಪಟ್ಟು ಈಗ್ಯೆ ಸುಮಾರು 4-5 ವರ್ಷವಾಯಿತು. ನನ್ನ ತಂದೆಗೆ ಒಟ್ಟು 9 ಎಕರೆ 13 ಗುಂಟೆ ಜಮೀನು ಇತ್ತು. ಅದರ ಸರ್ವೆ ನಂಬರುಗಳು ಗೊತ್ತು. ರಿ.ಸ.ನಂ. 16 ರಲ್ಲಿ 3 ಎಕರೆ 20 ಗುಂಟೆ ಇದೆ. ಹೀರೂರು ಗ್ರಾಮದ ರಿ.ಸ.ನಂ. 199/3 ರಲ್ಲಿ 14 ಗುಂಟೆ ಇದೆ. ಅದೇ ಗ್ರಾಮದ ರಿ.ಸ.ನಂ. 275/1 ರಲ್ಲಿ 3 ಎಕರೆ ಜಮೀನು ಇದೆ. ಅದೇ ಗ್ರಾಮದ ರಿ.ಸ.ನಂ. 275/4 ರಲ್ಲಿ 2 ಎಕರೆ 212 ಗುಂಟೆ ಇದೆ. ಮೇಲೆ ಹೇಳಿದ ಜಮೀನುಗಳನ್ನು ಹೊರತುಪಡಿಸಿ ನನ್ನ ತಂದೆಗೆ ಬೇರೆ ಯಾವುದೇ ಜಮೀನುಗಳು ಇರಲಿಲ್ಲ. ನಾವು ವಾಸ ಇರುವ ಮನೆಯ ವಿ ಪಿ ಸಿ ನಂ. 236 ಮತ್ತು 237/ಎ. ಸದರಿ ಎರಡು ಪಂಚಾಯತಿ ಆಸ್ತಿಗಳನ್ನು ಹೊರತುಪಡಿಸಿ ನಮಗೆ ಬೇರೆ ಯಾವುದೇ ಪಂಚಾಯತಿ ಆಸ್ತಿಗಳು ಇಲ್ಲ. ಸದರಿ ವಿ ಪಿ ಸಿ ಆಸ್ತಿಗಳಲ್ಲಿ ನಾನು ಮತ್ತು ನನ್ನ ಸಹೋದರರು ವಾಸ ಇದ್ದೇವೆ. ಸದರಿ ವಿ ಪಿ ಸಿ ಆಸ್ತಿಗಳು ನನ್ನ ಮತ್ತು ನನ್ನ ಸಹೋದರರ ಹೆಸರಿನಲ್ಲಿವೆ. ಸದರಿ ವಿ ಪಿಸಿ ಆಸ್ತಿಗಳನ್ನು ನಮ್ಮ ತಾಯಿ ಹೇಳಿದ್ದರಿಂದ ನಮ್ಮ ಹೆಸರಿನಲ್ಲಿ ಮಾಡಿಕೊಂಡಿದ್ದೇವೆ. ಯಾವ ಇಸವಿಯಲ್ಲಿ ನಮ್ಮ ಹೆಸರಿಗೆ ಮಾಡಿಕೊಂಡಿದ್ದೇವೆ ಎಂದು ನೆನಪಿಲ್ಲ. ಸರಕಾರದಿಂದ ನೀಡುವ ಮನೆ ನಿರ್ಮಾಣ ಮತ್ತು ಶೌಚಾಲಯ ನಿರ್ಮಾಣದ ಸೌಲಭ್ಯವನ್ನು ಪಡೆಯಲು ಮೇಲೆ ಹೇಳಿದ ವಿ ಪಿ ಸಿ ಆಸ್ತಿಗಳನ್ನು ನಮ್ಮ ಹೆಸರಿನಲ್ಲಿ ಮಾಡಿಕೊಂಡಿದ್ದೇವೆ.

**2.** ದಾವಾ ಬಿ ಶೆಡ್ಯೂಲ ನ **1** ಮತ್ತು **4** ನೇ ಆಸ್ತಿಗಳು ನನ್ನ ಹೆಸರಿನಲ್ಲಿ ದಾಖಲಿವೆ. ದಾವಾ ಬಿ ಶೆಡ್ಯೂಲನ **2** ನೇ ಆಸ್ತಿ **2** ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಿದೆ. ದಾವಾ ಬಿ ಶೆಡ್ಯೂಲನ **3** ನೇ ಆಸ್ತಿ **1** ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಿದೆ. ಸದರಿ ಆಸ್ತಿಗಳನ್ನು ನಮ್ಮ ಹೆಸರಿನಲ್ಲಿ ದಾಖಲು ಮಾಡಿಕೊಂಡು **4-5** ವರ್ಷಗಳಾಯಿತು. ಅದಕ್ಕೂ ಮೊದಲು ಸದರಿ ಜಮೀನುಗಳು ನನ್ನ ತಾಯಿ ಮತ್ತು ಅಣ್ಣನ ಹೆಸರಿನಲ್ಲಿತ್ತು. ನನ್ನ ತಾಯಿ ಮತ್ತು ನನ್ನ ಅಣ್ಣನ ಹೆಸರಿನಲ್ಲಿರುವ ಪೂರ್ವದಲ್ಲಿ ಸದರಿ ಜಮೀನುಗಳು ನನ್ನ ತಂದೆಯ ಹೆಸರಿನಲ್ಲಿತ್ತು. ದಾವಾ ಜಮೀನುಗಳು ನನ್ನ ತಾಯಿ ಮತ್ತು **1** ನೇ ಪ್ರತಿವಾದಿಯ ಹೆಸರಿನಲ್ಲಿ ಯಾವ ಇಸವಿಯಲ್ಲಿ ದಾಖಲಾಯಿತು ಎಂದು ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡ ನಂತರ ದಾವಾ ಜಮೀನುಗಳು ನನ್ನ ತಾಯಿ ಮತ್ತು **1** ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾದವು. ದಾವಾ ಬಿ ಶೆಡ್ಯೂಲನ **1** ನೇ ಆಸ್ತಿ ನನ್ನ ತಾಯಿ ಹೇಳಿದ್ದರಿಂದ ನನ್ನ ಹೆಸರಿನಲ್ಲಿ ದಾಖಲಾಯಿತು. ನಮ್ಮ ತಾಯಿ ತೀರಿಕೊಂಡ ನಂತರ ದಾವಾ ಜಮೀನುಗಳು ನನ್ನ ಮತ್ತು ನನ್ನ ಸಹೋದರರ ಹೆಸರಿನಲ್ಲಿ ದಾಖಲಾದವು. ಸರಕಾರಿ ಸೌಲಭ್ಯ ಪಡೆಯುವ ಸಲುವಾಗಿ ದಾವಾ ಜಮೀನುಗಳನ್ನು ನನ್ನ ಮತ್ತು ನನ್ನ ಸಹೋದರರ ಹೆಸರಿನಲ್ಲಿ ದಾಖಲಿಸಿಕೊಳ್ಳುವಂತೆ ನನ್ನ ತಾಯಿ ಹೇಳಿದ್ದಳು. ನನ್ನ ತಂದೆ ತಾಯಿ ತೀರಿಕೊಂಡಾಗ ಅವರ **8** ಜನ ಮಕ್ಕಳು ಇದ್ದೇವು. ನನ್ನ ತಂದೆ ಮತ್ತು ತಾಯಿ ತೀರಿಕೊಂಡ ನಂತರ ದಾವಾ ಆಸ್ತಿಗಳನ್ನು ನಮ್ಮ ಹೆಸರಿನಲ್ಲಿ ಮಾಡಿಕೊಳ್ಳುವ ಬಗ್ಗೆ ಯಾವುದೇ ಹಿಸ್ಸೆಯಾಗಿಲ್ಲ. ಸರಕಾರಿ ಸೌಲಭ್ಯ ಪಡೆಯುವ ಸಲುವಾಗಿ ದಾವಾ ಆಸ್ತಿಗಳನ್ನು ನಮ್ಮ ಹೆಸರಿನಲ್ಲಿ ದಾಖಲು ಮಾಡಿಕೊಂಡಿರುವ ಬಗ್ಗೆ ವಾದಿಯರಿಗೆ ಗೊತ್ತಿಲ್ಲ ಎಂದರೆ ಗೊತ್ತಿದೆ. ವಾದಿಯರಿಗೆ ದಾವಾ ಆಸ್ತಿಗಳಲ್ಲಿ ಇರುವ ಹಿಸ್ಸೆಯ ಹಕ್ಕನ್ನು ಕಸಿದುಕೊಳ್ಳಬೇಕೆಂಬ ಕಾರಣಕ್ಕಾಗಿ ವಾದಿಯರಿಗೆ ಯಾವುದೇ ಮಾಹಿತಿಯನ್ನು ನೀಡದೇ ನಾನು ಮತ್ತು ನನ್ನ ಸಹೋದರರು ದಾವಾ ಆಸ್ತಿಗಳಲ್ಲಿ ನಮ್ಮ ಹೆಸರುಗಳನ್ನು ಮಾತ್ರ ದಾಖಲಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**3.** ನನ್ನ ತಂದೆಯ ಮರಣಾನಂತರ ಅವರ ವಾರಸುದಾರರಾಗಿ ನಮ್ಮ ತಾಯಿ, ವಾದಿಯರು ಮತ್ತು ಪ್ರತಿವಾದಿಯರಾದ ನಮ್ಮ ಹೆಸರು ಡ ನಂ. **3113** ರ ಪ್ರಕಾರ ದಿನಾಂಕ **25-2-1989** ರಂದು ಮಂಜೂರಾಯಿತು ಎಂದರೆ ಸರಿ. ಆ ರೀತಿ ಡ ಮಂಜೂರಾದ ನಂತರದಿಂದ ವಾದಿಯರು, ನಾನು ಮತ್ತು ನನ್ನ ಸಹೋದರರು ದಾವಾ

ಎಲ್ಲಾ ಆಸ್ತಿಗಳನ್ನು ಜಂಟಿಯಾಗಿ ವಹಿವಾಟು ಉಪಬೋಗ ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿ.

( ಈ ಹಂತದಲ್ಲಿ ವಾದಿಯರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್